RNU AIR DHARWAD

FEBRUARY 16, 2025
ALL INDIA RADIO- DHARWAD
PRADESH SAMACHARA (KANNADA) 12.00 PM

ಮಹದಾಯಿ ನದಿ ನೀರು ಹಂಚಿಕೆ ವಿ ೕಯದಲ್ಲಿ, ಪಕ್ಷಬೇಧ ಮರೆತು, ರಾಜ್ಯದ ಹಿತಕಾಯುವ ಬದ್ಧತೆ ತೋರಬೇಕಿದೆ ಎಂದು, ಜಾತ್ಯತೀತ ಜನತಾದಳದ ವರಿ ್ಠ ಎಚ್.ಡಿ. ದೇವೇಗೌಡ ಹೇಳಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳಸಾ ಹಾಗೂ ಬಂಡೂರಿಯಿಂದ ರಾಜ್ಯದ ಪಾಲಿನ, 3 ದಶಾಂಶ 5 ಟಿ.ಎಂ.ಸಿ. ನೀರು ಪಡೆಯಲು, ರಾಜ್ಯದ ಪರವಾಗಿ ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಂಡಿಸಬೇಕಿದೆ, ಎಂದರು. ಗೋದಾವರಿ, ಕೃ ್ಣ, ಕಾವೇರಿ ನದಿಗಳ ಜೋಡಣೆ ಮಾಡುವಂತೆ ಕೇಂದ್ರಕ್ಕೆ ಮನವಿ ಮಾಡುವುದಾಗಿ, ಅವರು ತಿಳಿಸಿದರು.

<><><>

ಕೇಂದ್ರ ಪುರಸ್ಕೃತ ಅಟಲ್ ಭೂ ಜಲ ಯೋಜನೆಯಡಿ, ಸಮುದಾಯದ ಸಹಭಾಗಿತ್ವದೊಂದಿಗೆ, ಅಂತರ್ಜಲ ನಿರ್ವಹಣೆ, ಜಲ ಭದ್ರತಾ ಯೋಜನೆ ಕುರಿತು, ಗದಗ ಜಿಲ್ಲೆಯ ರೋಣ ತಾಲೂಕಿನ ರೈತರಿಗೆ, ಬರುವ 18 ಹಾಗೂ 19 ರಂದು ತರಬೇತಿ ಶಿಬಿರ ಆಯೋಜಿಸಲಾಗಿದೆ ಎಂದು, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ತಾರಾಮಣಿ ಜಿ.ಎಚ್. ತಿಳಿಸಿದ್ದಾರೆ.

<><><>

ಕಾಂತರಾಜು ಆಯೋಗದ ವರದಿ ಬಗ್ಗೆ, ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಲು, ಸಚಿವ ಸಂಪುಟ ತೀರ್ಮಾನಿಸಿದೆ ಎಂದು, ಸಹಕಾರ ಖಾತೆ ಸಚಿವ ಕೆ.ಎನ್. ರಾಜಣ್ಣ ಸ್ಪಷ್ಟಪಡಿಸಿದ್ದಾರೆ. ತುಮಕೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಾಮರಾಜನಗರದಲ್ಲಿ ಆಯೋಜಿತ, ಸಚಿವ ಸಂಪುಟ ಸಭೆಯಲ್ಲಿ, ಈ ಕುರಿತು ಚರ್ಚೆ ನಡೆಯಲಿದೆ, ಎಂದರು.

<><><>

ಕಳೆದ 2 ವ ್ೕಗಳಲ್ಲಿ, ಲೋಕಾಯುಕ್ತಕ್ಕೆ ಗಣನೀಯವಾಗಿ, 23 ಸಾವಿರ ದೂರುಗಳು ಸಾರ್ವಜನಿಕರಿಂದ ಸಲ್ಲಿಕೆಯಾಗಿವೆ. ಭ್ರಷ್ಟಾಚಾರ, ಸಾಮಾಜಿಕ ಸಂರಚನೆಯನ್ನು ಶಿಥಿಲಗೊಳಿಸುತ್ತದೆ ಎಂದು, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಕಳವಳ ವ್ಯಕ್ತಪಡಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು ನವನಗರದ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ, ಐದು ದಿನಗಳ ಕಾಲ ನಡೆದ, ಎನ್.ಎಸ್.ಎಸ್. ಅಧಿಕಾರಿಗಳ ರಾಜ್ಯ ಮಟ್ಟದ ತರಬೇತಿ ಶಿಬಿರದ, ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಲೋಕಾಯುಕ್ತ ಬಿ.ಎಸ್. ಪಾಟೀಲ ಧ್ವನಿ 45 ಸೆಕೆಂದುಗಳು

<><><>

ಮಂಡ್ಯ ಜಿಲ್ಲೆಯ, ಆತಗೂರು ಎಂಬಲ್ಲಿ 'ಕಾಳಿ' ಹೆಸರಿನ ನಾಯಿ ಕುರಿತ ಶಾಸನ ವಿಶೇ ´ ಮಹತ್ವ ಹೊಂದಿದ್ದು, ಅದನ್ನು ಸಂರಕ್ಷಿಸಲು, ಜಿಲ್ಲಾಡಳಿತ ವಿಶೇಷ ಪ್ರಯತ್ನ ಕೈಗೊಂಡಿರುವುದು, ಶ್ಲಾಘನೀಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದ್ದಾರೆ. ಕೆರೆ, ಕಟ್ಟೆಗಳ ಅಳಿವು ಉಳಿವು ಕುರಿತು, ಮಂಡ್ಯದಲ್ಲಿ ಅಧಿಕಾರಿಗಳೊಂದಿಗೆ ಅವರು ಚಿಂತನ ಕಾರ್ಯಕ್ರಮ ನಡೆಸಿದರು. ಸಾಮುದಾಯಿಕ ಸಹಭಾಗಿತ್ವದಲ್ಲಿ, ಕೆರೆ, ಕಟ್ಟೆ ಹಾಗೂ ಐತಿಹಾಸಿಕ ಸ್ಮಾರಕಗಳ ರಕ್ಷಣೆಗೆ ಒತ್ತು ನೀಡಬೇಕು ಎಂದು ಅವರು ಸಲಹೆ ನೀಡಿದರು.

<><><>

ಪರ್ವೀನ್ ಬೇಗಂ ಸ್ಮೃತಿ ಸಂಗೀತ ಮತ್ತು ಶಿಕ್ಷಣ ಟ್ರಸ್ಟ್ ವತಿಯಿಂದ ಇಂದು ಸಂಜೆ 5.30 ಕ್ಕೆ ಧಾರವಾಡದ ಸೃಜನಾ ರಂಗಮಂದಿರದಲ್ಲಿ ಪರ್ವೀನ್ ಬೇಗಂ, ಉಸ್ತಾದ ಅಬ್ದುಲ್ ಖಾದರ್ ಖಾನ್ ಮತ್ತು ಪಂ.ಬಸವರಾಜ ಬೆಂಡಿಗೇರಿ ಅವರ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಇದೇ ಸಂದರ್ಭಧಲ್ಲಿ ಉಸ್ತಾದ ಫಯಾಜ್ ಖಾನ್ ಅವರ ಜೀವನ ಕಥನ ಪುಸ್ತಕ ಬಿಡುಗಡೆಯಾಗಲಿದೆ. ಮುಖ್ಯ ಅಥಿತಿಗಳಾಗಿ ವಿಧಾನಸಭೆ ವಿಪಕ್ಷ ಉಪನಾಯಕ, ಅರವಿಂದ ಬೆಲ್ಲದ ಸೇರಿದಂತೆ ಪಂಡಿತ ಬಿ.ಎಸ್.ಮಠ, ಸೌಭಾಗ್ಯಾ ಕುಲಕರ್ಣಿ ಹಾಗೂ ಸಿ.ಯು.ಬೆಳ್ಳಕ್ಕಿ ಪಾಲ್ಗೊಳ್ಳಲಿದ್ದಾರೆ.

<><><>

ಗದಗ ಸಮೀಪದ ನಾಗಾವಿಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ, ಲಾವಣಿ ಹಾಗೂ ಗೀಗಿ ಪದ ಶಿಬಿರ ನಡೆಯಿತು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಹಿರಿಯ ಕಲಾವಿದ ಬಿ.ಆರ್.ಪೊಲೀಸ್ ಪಾಟೀಲ, ಹಿರಿಯ ಜಾನಪದ ಕಲಾವಿದರಾದ, ಯಲ್ಲವ್ವ ಸಾಲಿಮನಿ, ಲಕ್ಷ್ಮೀಬಾಯಿ ಮಾದರ, ಸಾವಿತ್ರಿಬಾಯಿ ಪೂಜಾರ, ಜಾನಪದ ಅಕಾದೆಮಿ ಸಂಚಾಲಕ ಶಂಕ್ರಣ್ಣ ಸಂಕಣ್ಣವರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

<><><>

ಧಾರವಾಡ ರಂಗಾಯಣ ಆಯೋಜಿಸಿರುವ 6 ದಿನಗಳ ಬಹುಭಾಷಾ ನಾಟಕೋತ್ಸವದ ಮೂರನೆ ದಿನವಾದ ಇಂದು ಸಂಜೆ 6.30 ಕ್ಕೆ ಪಂ.ಬಸವರಾಜ ರಾಜಗುರು ಬಯಲು ರಂಗಮಂದಿರದಲ್ಲಿ ಕೊಲ್ಹಾಪುರದ ಅಭಿರುಚಿ ತಂಡ, ಜಿತೇಂದ್ರ ದೇಶಪಾಂಡೆ ಅವರ ನಿರ್ದೇಶನದ 'ಶ್ವೇತವರ್ಣೆ, ಶಾಮಕರ್ಣೆ' ಮರಾಠಿ ನಾಟಕ ಪ್ರದರ್ಶಿಸಲಿದೆ.

<><><>

ದೇಶದ ಅಭಿವೃದ್ಧಿ ಹೊಂದಿದ, ಪ್ರಮುಖ ಬಂದರುಗಳ ಪೈಕಿ, ನವ ಮಂಗಳೂರು ಬಂದರಿಗೆ 3ನೇ ಸ್ಥಾನ ಲಭ್ಯವಾಗಿದೆ. ಇಲ್ಲಿಂದ ಕಾಫಿ ರಫ್ತು ಪ್ರಮಾಣ, ಶೇಕಡ 29 ರಷ್ಟು ಹೆಚ್ಚಾಗಿದೆ ಎಂದು, ನವ ಮಂಗಳೂರು ಬಂದರು ಟ್ರಸ್ಟ್ ಅಧ್ಯಕ್ಷ ವೆಂಕಟರಮಣ ಅಕ್ಕಿರಾಜು ತಿಳಿಸಿದ್ದಾರೆ. ಮಡಿಕೇರಿಯಲ್ಲಿ ಆಯೋಜಿಸಿದ್ದ, ಕೊಡಗು, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳ, ವಾಣಿಜ್ಯೋದ್ಯಮ ಸಂಸ್ಥೆ ಪದಾಧಿಕಾರಿಗಳು, ಕಾಫಿ ಉದ್ಯಮಿಗಳು ಹಾಗೂ ರಫ್ತು ವಹಿವಾಟುದಾರರ ಸಭೆಯಲ್ಲಿ ಮಾತನಾಡಿದ ಅವರು, ವಹಿವಾಟುದಾರರಿಗೆ ಸಕಲ ರೀತಿ ಸೌಲಭ್ಯ ಕಲ್ಪಿಸಲು, ತಂತ್ರಜ್ಞಾನದೊಂದಿಗೆ ಬಂದರನ್ನು ಆಧುನೀಕರಿಸಲಾಗಿದೆ ಎಂದರು.

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..